# <u>ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ</u>

# <u>ಕೆ.ಆರ್.ನಗರ</u>

## <u>ಸಿ.ಮಿಸ್ 437/2023</u>

***<u>ಪಿ ಡಬ್ಲೂ-1</u>***

| | | |
|---|---|---|
| ಸಾಕ್ಷಿದಾರರ ಹೆಸರು | - | ಪಾರ್ವತಿ |
| ಗಂಡನ ಹೆಸರು | - | ಕಲೀಶಾ ಬಿ ಪಿ |
| ವಯಸ್ಸು | - | 33 ವರ್ಷ |
| ಕೆಲಸ | - | ರೇಲ್ವೆ ಇಲಾಖೆಯಲ್ಲಿ ಸಹಾಯಕಿ |
| ವಾಸ | - | ಹಾಸನ |

**<u>ಸಾಕ್ಷಿಯನ್ನು ದಿನಾಂಕ 17-02-2024 ರಂದು ಮರಳಿ ಕರೆಯಿಸಿ ಪ್ರಮಾಣವಚನ ಬೋದಿಸಲಾಯಿತು.</u>**

ರ **<u>ಅರ್ಜಿದಾರರ ಪರ ವಕೀಲರು</u>**

ದಿಃ 10-05-2015 ರಂದು ನನ್ನ ಹಾಗೂ ಎದುರುದಾರರ ವಿವಾಹವು ಚುಂಚನಕಟ್ಟೆಯಲ್ಲಿರುವ ಶ್ರೀ ರಾಮದೇವರ ಕಲ್ಯಾಣ ಮಂಟಪದಲ್ಲಿ ನೇರವೇರಿರುತ್ತದೆ. ಮದುವೆಯ ಸಂದರ್ಭದಲ್ಲಿ ಎದುರುದಾರರಿಗೆ ವರದಕ್ಷಿಣೆಯಾಗಿ 250 ಗ್ರಾಂ ಚಿನ್ನವನ್ನು ಕೊಟ್ಟು ಮದುವೆಯ ಖರ್ಚನ್ನು ಸಹ ಸಂಪೂರ್ಣವಾಗಿ ನಾವೇ ವಹಿಸಿಕೊಂಡು ಮದುವೆಯನ್ನು ಮಾಡಿ ಕೊಟ್ಟಿರುತ್ತಾರೆ. ಅದೇ ರೀತೀ ಮದುವೆಯ ನಿಶ್ಚಿತಾರ್ಥದ ಸಂದರ್ಭದಲ್ಲಿ ಎದುರುದಾರರಿಗೆ ಬಟ್ಟೆ ಮತ್ತು ಉಂಗುರವನ್ನು ಕೊಟ್ಟಿರುತ್ತಾರೆ. ಅದೇ ರೀತಿ ಮದುವೆಯ ಸಂದರ್ಭದಲ್ಲಿ ವಾಚ್ ನ್ನು ಸಹ ಕೊಟ್ಟಿರುತ್ತೇವೆ.

2. ಮದುವೆಯಾದ ನಂತರ ನಾನು ಮೈಸೂರಿನ ರೇಲ್ವೆ ಇಲಾಖಯ ಕ್ವಾರ್ಟಸ್ ನಲ್ಲಿ ವಾಸವಾಗಿದ್ದು ಎದುರುದಾರರು ನನ್ನ ಜೊತೆ ಅಲ್ಲಿಯೇ ಬಂದು ಹೋಗಿ ವಾಸವಾಗಿದ್ದರು. ಸದರಿ ಮತ್ತು ನನ್ನ ಸಂದರ್ಭದಲ್ಲಿ ನನ್ನ ಹಾಗೂ ಎದುರುದರರ ದಾಂಪತ್ಯದಿಂದ ನಮೃತಗೌಡ ಎಂಬ ಮಗನು ಸಹ ದಿ 03-02-2016 ರಲ್ಲಿ ಜನಿಸಿರುತ್ತಾನೆ. ನಂತರ ಅಲ್ಲೇ

ನಾನು ನನ್ನ ವೃತ್ತಿಯನ್ನು ಮುದುವರೆಸಿದ್ದು . ನಂತರ ನಮ್ಮ ದಾಂಪತ್ಯದಲ್ಲಿ ಜ್ಞಾನವಿ ಬಿ ಕೆ ರವರು ದಿಃ 05-06-2019 ರಲ್ಲಿ ಜನಿಸಿರುತ್ತಾಳೆ. ಇದಾದ ನಂತರ ಎದುರುದಾರರು ಮತ್ತು ನನ್ನ ನಡುವೆ ಜಗಳ ಪ್ರಾರಂಭವಾಗಿರುತ್ತದೆ.

3. ಗಲಾಟೆಯಾದ ನಂತರ ಎದುರುದಾರರು ನಮ್ಮ ಮಗಳಾದ ಜ್ಞಾನವಿ ಬಿ ಕೆ ಯವರನ್ನು ತಮ್ಮ ಜೊತೆಯಲ್ಲಿ ಕರೆದುಕೊಂಡು ಹೋಗಿ ಇಟ್ಟುಕೊಂಡಿರುತ್ತಾರೆ. ಈಗ್ಗೆ 1 ½ ವರ್ಷದ ಹಿಂದೆ ಎದುರುದಾರರು ಮೈಸೂರಿಗೆ ಬಂದು ಗಲಾಟೆಯನ್ನು ಮಾಡಿ ನಾನು ಹೇಳಿದಂತೆ ಕೇಳಬೇಕು ಜಂಟಿ ಖಾತೆಯನ್ನು ತೆರೆಯಬೇಕು ಮತ್ತು ಹಾಸನಕ್ಕೆ ವರ್ಗಾವಣೆಯನ್ನು ಮಾಡಿಕೊಳ್ಳಬೇಕು ಎಂದು ತಿಳಿಸಿದ್ದು ನಾನು ಅದರಂತೆ ಅವರ ಮಾತನ್ನು ಕೇಳಿ ಹಾಸನಕ್ಕೆ ವರ್ಗಾವಣೆ ಮಾಡಿಸಿಕೊಂಡಿರುತ್ತೇನೆ . ಅದರರೂ ಸಹ ಹಾಸನದಲ್ಲಿದ್ದ 6 ತಿಂಗಳುಗಳ ಕಾಲ ಎದುರುದಾರು ಹಾಸನಕ್ಕೆ ಬಂದಿರುವುದಿಲ್ಲ.

4. ನಾನು ನಮ್ಮ ತಂದೆಯ ಜೊತೆಗೆ ನನ್ನ ಮಗಳನ್ನು ನೋಡಲು ಬೆಳವಾಡಿ ಗ್ರಾಮಕ್ಕೆ ಹೋಗಿದ್ದಾಗ ಎದುರುದಾರರು ನಮ್ಮ ತಂದೆಯ ಜೊತೆಗೆ ಜಗಳ ತೆಗೆದು ಇಷ್ಟು ದಿನಗಳ ಕಾಲ ಯಾರ ಜೊತೆ ಇದ್ದೆ ಎಂದು ಅಸಭ್ಯವಾಗಿ ವರ್ತಿಸಿರುತ್ತಾರೆ. ಇದಾದ 4 ತಿಂಗಳ ನಂತರ ಎದುರುದಾರರ ಸಹೋದರ ಮಾವ ಅಶೋಕರವರು ಮಾತನ್ನು ಕೇಳಿ ಎದುರುದಾರರು ನನ್ನ ಮಗನನ್ನು ಹಾಸನದ ಸಿ ಕೆ ಎಸ್ ಇಂಗ್ಲೀಷ ಶಾಲೆಗೆ ಸೇರಿಸಿರುತ್ತಾರೆ .

5. ಆ ಸಮಯದಲ್ಲಿ ನಾನು ನನ್ನ ಮಗನನ್ನು ಕರೆದುಕೊಂಡು ಎದುರುದಾರರ ಊರಿಗೆ ಹೋಗುತ್ತಿದ್ದೇನು. ಇದಾದ ನಂತರ ನನ್ನ ಮಗಳನ್ನು ಸಹ ಶಾಲೆಗೆ ಸೇರಿಸಲು ಎದುರುದಾರರ ಅನಮತಿಯನ್ನು ನೀಡಿದ್ದು, ಅವಳನ್ನು ಎಚ್ ಕೆ ಎಸ್ ಇಂಟರ್ ನ್ಯಾಶನಲ್ ಶಾಲೆಗೆ ಸೇರಿಸಿರುತ್ತೆನೆ. ಇದಾದ ನಂತರ ಎದುರುದಾರರ ತಾಯಿಯನ್ನು ಹಾಸನಕ್ಕೆ ಮಕ್ಕಳನ್ನು ನೂಡಿಕೊಳ್ಳುವ ಸಲುವಾಗಿ ಕರೆದುಕೊಂಡು ಬಂದಿರುತ್ತಾರೆ.

6. ಎದುರುದಾರರ ತಾಯಿಗೆ ವಯಸ್ಸಾಗಿದ್ದು ಅವರಿಗೆ ಬಿ. ಪಿ ಮತ್ತು ಪಾರ್ಶ್ವ ವಾಯು ಮತ್ತು ಉಸಿರಾಟಕ್ಕೆ ಸಂಬಂಧಿಸಿದ ತೊಂದರೆಯು ಇರುತ್ತದೆ. ಅದ್ದರಿಂದ ಎದುರುದಾರರ ದೊಡ್ಡಪ್ಪನ ಮಕ್ಕಳು ಮತ್ತು ಸಂಬಂಧಿಕರೆಲ್ಲೂ ಸಹ ಹಾಸನಕ್ಕೆ ಬರುವುದನ್ನು

ಪ್ರಾರಂಭಿಸಿದ್ದಾರೆ. ಹೀಗಿರುವಾಗ ಒಂದು ದಿನ ಎದುರುದಾರ ತಾಯಿ ನಮ್ಮಅತ್ತೆ ಅವರಿಗೆ ಹಾಸನ ನಗರದಲ್ಲಿ ಇರುವುದು ಸರಿ ಹೊಂದುವುದಿಲ್ಲ ಎಂದು ಮತ್ತು ಅವರನ್ನು ಅವರ ಊರಿಗೆ ಕರೆದುಕೊಂಡು ಹೋಗದೆ ಇದ್ದರೆ ಆತ್ಮ ಹತ್ಯೆ ಮಾಡಿಕೊಳ್ಳುವುದಾಗಿ ಒಂದು ಬಾರಿ ಆತ್ಮ ಹತ್ಯೆಗೂ ಸಹ ಪ್ರಯತ್ನ ಪಟ್ಟಿರುತ್ತಾರೆ.

7. ನಂತರ ಎದುರುದಾರರ ತಮ್ಮ ಮತ್ತು ತಂಗಿ ಇಬ್ಬರು ಬಂದು ನಮ್ಮ ಅತ್ತೆಯನ್ನು ಸಾಯುವವರೆಗೂ ನಾವೇ ನೋಡಿ ಕೊಳ್ಳುತ್ತೇವೆ ಎಂದು ಅವರ ಜೊತೆಗೆ ಕರೆದುಕೊಂಡು ಹೋಗಿರುತ್ತಾರೆ. ಇದಾದ 15 ದಿನಗಳ ನಂತರ ಎದುರುದಾರರು ನನ್ನ ಇಬ್ಬರು ಮಕ್ಕಳನ್ನು 16 ದಿನಗಳ ಕಾಲ ಶಾಲೆಗೆ ಕಳುಹಿಸಿರಲಿಲ್ಲ. ನನಗೆ ಶಾಲೆಯಿಂದ ಶಿಕ್ಷಕರು ಕರೆ ಮಾಡಿ ವಿಚಾರಿಸಿದರು ಸಹ ಶಿಕ್ಷಕರರನ್ನು ಸಹ ಎದುರುದಾರರು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ.

8. ಇದಾದ ನಂತರ ನಾನು ನಮ್ಮ ವಕೀಲರ ಮುಖಾಂತರ ಒಂದು ನೋಟೀಸನ್ನು ಎದುರುದಾರರಿಗೆ ಕೊಡಿಸಿದ್ದು ಅದರಿಂದ ಎದುರುದಾರರು ನಮ್ಮ ಮನೆಯ ಹತ್ತಿರ ಬಂದು ಬೀಗವನ್ನು ಒಡೆದು, ಗ್ಲಾಸ್ ಒಡೆದು, ಕುಡಿದು ಬಂದು ಗಲಾಟೆಯನ್ನು ಮಾಡಿರುತ್ತಾರೆ. ನಂತರ ನಾನು ಅದಕ್ಕೆ ಪೊಲೀಸ್ ಠಾಣೆಗೆ ಕರೆ ಮಾಡಿ ತಿಳಿಸಿದ್ದು. ನನ್ನನ್ನು ಹಾಗೂ ಎದುರುದಾರರನ್ನು ಮಹಿಳಾ ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿರುತ್ತಾರೆ.

9. ನಂತರ ಮಹಿಳಾ ಪೊಲಲೀಸ್ ಠಾಣೆಯಲ್ಲಿ ಬುದ್ಧಿ ಮಾತು ಹೇಳಿ ರಾಜಿಯನ್ನು ಮಾಡಿ ಕಳುಹಿಸಿ ಕೊಟ್ಟಿರುತ್ತಾರೆ. ಇದಾದ ನಂತರ ಮಕ್ಕಳನ್ನು ನನ್ನ ಜೊತೆಗೆ ಕಳುಹಿಸಿಕೊಟ್ಟಿತ್ತಾರೆ. ನಂತರ ಹಾಸನದಿಂದ ಹೊರಟು ಹೋದ ಎದುರುದಾರರು ಹಾಸನಕ್ಕೆ ಬಂದಿರುವುದಿಲ್ಲ ಮತ್ತು ಮಕ್ಕಳನ್ನು ಸಹ ವಿಚಾರಿಸಿರುವುದಿಲ್ಲ. ಯಾವಾಗಲಾದರೂ ಒಮ್ಮೆ ವಿಡಿಯೋ ಕರೆಯನ್ನು ಮಾಡಿ ಕೆಟ್ಟದಾಗಿ ಬೈದಿರುತ್ತಾರೆ.

10. ಎದುರುದಾರರು ನನಗೆ ಕರೆಮಾಡಿ ನಾನು ಜಂಟಿ ಖಾತೆಯನ್ನು ತೆರೆಯಬೇಕು, ಮಕ್ಕಳನ್ನು ಮತ್ತು ನಾನು ಸಹ ಬೆಳವಾಡಿಗೆ ತೆರಳಬೇಕು ಮತ್ತು ಕೆಲಸಕ್ಕೆ ಹೋಗಬಾರದು ಎಂದು ತಿಳಿಸಿರುತ್ತಾರೆ. ನನ್ನ ಎರಡನೇ ಮಗುವಾದ ಜ್ಞಾನವಿ ಬಿ ಕ ಯವರಿಗೆ ನರಕ್ಕೆ ಸಂಬಂದಿ,ಸಿದ ಖಾಯಿಲೆ ಇದ್ದು ಕ್ಯಾಲ್ಸಿಯಂ ಕೊರತೆ ಇದ್ದು ಅವರಿಗೆ ಪ್ರತಿ ತಿಂಗಳು ಸಹ

ಚಿಕಿತ್ಸೆಯನ್ನು ಕೊಡಿಸುತ್ತಿದ್ದೇನೆ. ಮಗುವಿನ ಚಿಕಿತ್ಸೆಗೆ ಮಾಸಿಕವಾಗಿ 20 ಸಾವಿರ ಹಣ ಬೇಕಾಗುತ್ತದೆ. ಅದೇ ರೀತಿ ನಾವು ಬಾಡಿಗೆ ಮನೆಯಲ್ಲಿದ್ದು ನಮ್ಮ ಜೀವನಕ್ಕೆ ಮಾಸಿಕವಾಗಿ ಮಕ್ಕಳಿಗೆ ಪ್ರತಿ ತಿಂಗಳು 10 ಸಾವಿರ ಖರ್ಚು ಆಗುತ್ತದೆ. ಪ್ರತಿ ವರ್ಷಕ್ಕೆ ಒಬ್ಬರಿಗೆ 75 ಸಾವಿರ ಬೇಕಾಗುತ್ತದೆ. ನನಗೆ ಎಲ್ಲಾ ಸಂಬಳ ಕಡಿತ ಗೊಂಡು ಕೇವಲ 32 ಸಾವಿರ ಮಾತ್ರ ತಿಂಗಳಿಗೆ ಬರುತ್ತದೆ. ಆದ್ದರಿಂದ ನನ್ನ ಹಾಗೂ ನನ್ನ ಮಕ್ಕಳ ಜೀವನ ನಿರ್ವಹಣೆಗೆ ಕಷ್ಟವಾಗಿರುತ್ತದೆ.

11. ಎದುರುದಾರರು ಸಹ ಶಿಕ್ಷಕರಾಗಿ ಕೊರಟಗಿರಿಯಲ್ಲಿ ಸರ್ಕಾರಿ ಸಹಾಯಕ ಶಿಕ್ಷಕನಾಗಿ ಕೆಲಸ ಮಾಡುತ್ತಿದ್ದು ಅವರಿಗೆ ಮಾಸಿಕವಾಗಿ 60 ಸಾವಿರ ಸಂಬಳ ಬರುತ್ತದೆ. ಎದುರುದಾರರ ನನ್ನ ಮಕ್ಕಳಿಗೆ ಯಾವುದೇ ರೀತಿಯ ಹಣಕಾಸಿನ ಸಹಾಯವನ್ನು ಮಾಡಿರುವುದಿಲ್ಲ. ಹಾಗಾಗಿ ಎದುರುದಾರರ ಕಡೆಯಿಂದ ನನಗೆ ಮತುತ ನನ್ನ ಮಕ್ಕಳಿಗೆ ಅರ್ಜಿಯಲ್ಲಿ ಕೇಳಿರುವ ಪರಿಹಾರವನ್ನು ಕೊಡಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಸಾಕ್ಷಿ ಒಂದು ಪ್ಲೇ ಸ್ಲಿಪ್ ನ್ನು ಹಾಜರು ಪಡಿಸಿದ್ದು ಅದನ್ನು ನಿಪಿ 1 ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ಅರ್ಜಿದಾರರ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಲಾಯಿತು.

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ ಹೇ ಕೇ ಸ ಇದೆ ಎಂ

(ಚಂದನ ಎಸ್ )

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,

ಮತ್ತು ಪ್ರದನ್ಯಾದಂ., ಕೆ.ಆರ್.ನಗರ